International Journal of Kannada Research 2023; 9(2): 21-28

International Journal of Kannada Research
www.kannadajournal.com

**ISSN: 2454–5813**
IJKR 2023; 9(2): 21-28
© 2023 IJKR
www.kannadajournal.com
Received: 19-01-2023
Accepted: 23-02-2023

**Dr. Rajeshwari S Matoli**
Librarian, B.L.D.E.
Association's Commerce, B.H.S.
Arts and T.G.P. Science College,
Jamkhandi, Bagalkot,
Karnataka, India

# ಸಮಾಜದಲ್ಲಿ ಗ್ರಂಥಾಲಯಗಳ ಪ್ರಾಮುಖ್ಯತೆ ಮತ್ತು ಪಾತ್ರ

**Dr. Rajeshwari S Matoli**

**ಪೀಠಿಕೆ**

ಅನಾದಿ ಕಾಲದಿಂದಲೂ ಗ್ರಂಥಾಲಯವನ್ನು "ಸಾಮಾಜಿಕ ಸಂಸ್ಥೆ" ಎಂದು ಪರಿಗಣಿಸಲಾಗಿದೆ. ಆಧುನಿಕ ಸಮಾಜದಲ್ಲಿ ಗ್ರಂಥಾಲಯವು ಅಪಾರವಾದ ಮಹತ್ವದ ಪಾತ್ರವನ್ನು ವಹಿಸುತ್ತದೆ ಮತ್ತು ಇದನ್ನು "ಜ್ಞಾನದ ಹೆಬ್ಬಾಗಿಲು" ಎಂದು ಹೇಳಲಾಗುತ್ತಿದೆ. ಅಂತರ್ಜಾಲ ಆಧಾರಿತ ಸಂಪನ್ಮೂಲಗಳನ್ನು ಒಳಗೊಂಡಂತೆ ಹೊಸ ಮಾಹಿತಿ ಮೂಲಗಳೊಂದಿಗೆ ಗ್ರಂಥಾಲಯಗಳ ಪಾತ್ರ ಮತ್ತು ಸ್ವರೂಪದಲ್ಲಿ ಇಂದು ಭಾರಿ ಬದಲಾವಣೆಯಾಗಿದೆ. ಇಂದು ಸಮಾಜದಲ್ಲಿ ಮಕ್ಕಳಿಂದ ಹಿಡಿದು ವಯಸ್ಕರು, ಶಿಕ್ಷಕರಿಂದ ಹಿಡಿದು ರಾಜಕಾರಣಿಗಳು, ಉದ್ಯಮಿಗಳು, ಗೃಹಿಣಿಯರು, ವಯಸ್ಸು, ವೃತ್ತಿ ಇತ್ಯಾದಿಗಳನ್ನು ಲೆಕ್ಕಿಸದೆ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಪ್ರತಿಯೊಬ್ಬರೂ ಗ್ರಂಥಾಲಯವನ್ನು ಬಳಸುತ್ತಾರೆ. ಇಂದಿನ ಮಾಹಿತಿ ಯುಗದಲ್ಲಿ ಮುದ್ರಿತ ಮತ್ತು ಮುದ್ರಿತವಲ್ಲದ ಸಂಪನ್ಮೂಲಗಳನ್ನು ಗ್ರಂಥಾಲಯದಲ್ಲಿ (Print and Electronic Resources) ಇರಿಸಲಾಗುತ್ತದೆ. ಸಾಂಪ್ರದಾಯಿಕ ದಾಖಲೆಗಳಾದ ಪುಸ್ತಕಗಳು, ವೃತ್ತ ಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಅಸಾಂಪ್ರದಾಯಿಕ ದಾಖಲೆಗಳಾದ ನಕ್ಷೆಗಳು, ಚಾರ್ಟ (chart)ಗಳು, ಇತ್ಯಾದಿಗಳನ್ನು ಗ್ರಂಥಾಲಯದ ಸೇವೆಗಳಾಗಿ ಬಳಕೆ ಮಾಡಲಾಗುತ್ತಿದೆ.

ಮಾಹಿತಿಯನ್ನು ಪೂರೈಸುವ ಉದ್ದೇಶದಿಂದ ಸಾಮಾಜಿಕ ಅಗತ್ಯತೆಯನ್ನು ಗ್ರಂಥಾಲಯವು ಪೂರ್ಣಗೊಳಿಸುತ್ತದೆ. ಇಲ್ಲಿ ಮಾನವ ಮತ್ತು ಮಾಹಿತಿಯ ಪರಸ್ಪರ ಕ್ರಿಯೆ ನಡೆಯುತ್ತದೆ. ಗ್ರಂಥಾಲಯಗಳು ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವ ಮೂಲಕ ರಾಷ್ಟ್ರಕ್ಕೆ ಬಹುಮುಖ್ಯ ಕೊಡುಗೆಯನ್ನು ನೀಡುತ್ತಿವೆ. ಆಧುನಿಕತೆಯಲ್ಲಿ ಮಾಹಿತಿಯ ಸಮೃದ್ಧಿಯೊಂದಿಗೆ ಅಗತ್ಯವಿರುವಾಗ ಮತ್ತು ಅಗತ್ಯವಿದ್ದಾಗ ಸಂಬಂಧಿಸಿದ ಮಾಹಿತಿಯನ್ನು ಪ್ರಸಾರ ಮಾಡುವ ಮೂಲಕ ಗ್ರಂಥಾಲಯಗಳು ಸಮಾಜಕ್ಕೆ ಸಹಾಯ ಮಾಡುತ್ತವೆ.

ಸಾರ್ವಜನಿಕ ಗ್ರಂಥಾಲಯ ಒಂದು ಮುಕ್ತವಾದ ಸಾರ್ವಜನಿಕ ಸಂಸ್ಥೆ. ಸಾರ್ವಜನಿಕ ಗ್ರಂಥಾಲಯ ಶ್ರೀ ಸಾಮಾನ್ಯನ ವಿಶ್ವವಿದ್ಯಾಲಯ ಎಂದು ಕರೆದಿರುವುದು ಅರ್ಥಪೂರ್ಣವಾಗಿದೆ. ಸರ್ಕಾರ ಸಾರ್ವಜನಿಕರಲ್ಲಿ ವಿದ್ಯೆ, ಜ್ಞಾನ ಓದಿನ ಬಗೆಗೆ ಅಭಿರುಚಿ ಮುಂತಾದವುಗಳನ್ನು ಬೆಳೆಸಲು ಉದ್ದೇಶಿಸಿ ಸ್ಥಾಪನೆ ಮಾಡಿದ ಮುಕ್ತ ಸಾರ್ವಜನಿಕ ವ್ಯವಸ್ಥೆಯೇ ಈ ಗ್ರಂಥಾಲಯಗಳು

**Corresponding Author:**
**Dr. Rajeshwari S Matoli**
Librarian, B.L.D.E.
Association's Commerce, B.H.S.
Arts and T.G.P. Science College,
Jamkhandi, Bagalkot,
Karnataka, India

ಕರ್ನಾಟಕ ಸರ್ಕಾರ 1965ರಲ್ಲಿ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ರೂಪಿಸಿ ಸಾರ್ವಜನಿಕ ಗ್ರಂಥಾಲಯಗಳ ಜಾಲದ ಬೆಳವಣಿಗೆಗೆ ಬುನಾದಿ ಹಾಕಿತು. ನಮ್ಮ ಕರ್ನಾಟಕ ರಾಜ್ಯ ಇಡೀ ಭಾರತದಲ್ಲಿಯೇ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯ ದೃಷ್ಟಿಯಿಂದ ಮಂಚೂಣಿಯಲ್ಲಿರುವ ರಾಜ್ಯವಾಗಿದೆ.

## ಗ್ರಂಥಾಲಯ ಮತ್ತು ಸಮಾಜ

ಪುರಾತನ ಕಾಲದಿಂದಲೂ ನಾವು ಗ್ರಂಥಾಲಯಗಳನ್ನು ಕಾಣಬಹುದು ಆದರೆ ಅವು ಸಾರ್ವಜನಿಕರ ಸ್ವತ್ತಾಗದೇ ರಾಜರ , ಉಳ್ಳವರ ಸ್ವತ್ತಾಗಿದ್ದವು. ಕ್ರಮೇಣ ಗ್ರಂಥಾಲಯಗಳು ಸಾರ್ವಜನಿಕರಿಗೆ ಮುಕ್ತ ಪ್ರವೇಶ ನೀಡಿ ಓದುಗರಿಗೆ ಅನುಕೂಲ ಕಲ್ಪಿಸಿಕೊಟ್ಟವು. ಇದೀಗ ಗ್ರಂಥಾಲಯಗಳು ಮಾಹಿತಿ ಕೇಂದ್ರಗಳಾಗಿ ಕೆಲಸ ನಿರ್ವಹಿಸುವ ಮತ್ತು ಸ್ಪರ್ಧಾತ್ಮಕ ಅಧ್ಯಯನ ಕೇಂದ್ರಗಳಾಗಿ ಕೆಲಸ ನಿರ್ವಹಿಸುವಷ್ಟು ಬೆಳದು ನಿಂತಿವೆ. ಹಿಂದೆ ಗ್ರಂಥಪಾಲಕನನ್ನು 'ಉಗ್ರಾಣಿಕ' ನೆಂದು, ಗ್ರಂಥಾಲಯವನ್ನು 'ಉಗ್ರಾಣ' ಎಂದು ಕರೆಯುತ್ತಿದ್ದರು. ಆಧುನಿಕ ಕಾಲದಲ್ಲಿ ಗ್ರಂಥಾಲಯಗಳು ಮಾಹಿತಿ ಕೇಂದ್ರಗಳಾಗಿ, ಸ್ಪರ್ಧಾತ್ಮಕ ಅಧ್ಯಯನ ಕೇಂದ್ರ, ಮಕ್ಕಳ, ವೃದ್ದರ, ಸಂಶೋಧನಾ, ಶೈಕ್ಷಣಿಕ, ವಿಶೇಷ, ವಿಶ್ವವಿದ್ಯಾಲಯ ಹೀಗೆ ಅನೇಕ ಪ್ರಕಾರದ ಗ್ರಂಥಾಲಯಗಳು ಓದುಗರಿಗೆ ಗ್ರಂಥ ದೊರಕಿಸಿಕೊಡುವ ಕೆಲಸ ಮಾಡುತ್ತಿವೆ. ಇಂತಹ ಗ್ರಂಥಾಲಯಗಳ ಅಭಿವೃದ್ಧಿಗೆ ಶ್ರಮಿಸಿದ ಅನೇಕ ಮಹನೀಯರಿದ್ದಾರೆ. ಅವರೆಂದರೆ, ಆಂಡ್ರ್ಯೂ ಕಾರ್ನೇಗಿ, ಚಾರ್ಲ್ಸ್‌ಅಮ್ಮಿ ಕಟ್ಟರ್, ಖುದಾಭಕ್ಷ ಖಾನ್, ಹೆನ್ರಿ ಎವ್ಲಿನ್ ಬ್ಲಿಸ್, ಮೆಲವಿಲ್ ಡ್ಯೂಯಿ ಮತ್ತು ಡಾ.ಎಸ್.ಆರ್.ರಂಗನಾಥನ್ ಮುಂತಾದವರು.

ಗ್ರಂಥಾಲಯ ವಿಜ್ಞಾನಕ್ಕೆ ಹಲವಾರು ಮಹತ್ವದ ಕೂಡುಗೆಗಳನ್ನು ನೀಡಿದ್ದಾರೆ. ಅವುಗಳೆಂದರೆ. ಗ್ರಂಥಾಲಯದ ಪಂಚಸೂತ್ರಗಳು, ದ್ವಿಬಿಂದು ವರ್ಗೀಕರಣ, ಸೂಚೀಕರಣ ಪರಾಮರ್ಶನ ಸೇವೆ. ಹೀಗೆ ಮುಂತಾದ ಹಲವಾರು ಮಹತ್ವದ ಕೂಡುಗೆಯನ್ನು ನೀಡಿದ್ದಾರೆ. ಯಾವುದೇ ಗ್ರಂಥಾಲಯಗಳು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಬೇಕಾದರೆ ಗ್ರಂಥಾಲಯ ಪಂಚಸೂತ್ರಗಳು ಅಗತ್ಯವಾಗಿವೆ. ಇವರು ನೀಡಿದ ಗ್ರಂಥಾಲಯ ವಿಜ್ಞಾನಕ್ಕೆ ಪಂಚಸೂತ್ರಗಳು ಹೀಗಿವೆ.

ಗ್ರಂಥಗಳು ಉಪಯೋಗಕ್ಕಾಗಿವೆ.

ಪ್ರತಿಯೊಬ್ಬ ಓದುಗನಿಗೂ ಅವರದೇ ಆದ ಗ್ರಂಥ.

ಪ್ರತಿಯೊಂದು ಗ್ರಂಥಕ್ಕೆ ಅದರದೇ ಆದ ಓದುಗ.

ಓದುಗರ ಸಮಯವನ್ನು ಉಳಿಸಿ.

ಗ್ರಂಥಾಲಯ ಬೆಳೆಯುತ್ತಿರುವ ಸಂಸ್ಥೆ.

ರಾಜ್ಯದಲ್ಲಿ ಪ್ರಸ್ತುತ ಸಾಲಿನವರೆಗೆ 1 ರಾಜ್ಯ ಕೇಂದ್ರ ಗ್ರಂಥಾಲಯ, 30 ಜಿಲ್ಲಾ ಕೇಂದ್ರ ಗ್ರಂಥಾಲಯಗಳು ಮತ್ತು 26 ನಗರ ಕೇಂದ್ರ ಗ್ರಂಥಾಲಯಗಳನ್ನು ಮತ್ತು 490 ಶಾಖೆಗಳನ್ನು ಪ್ರಾರಂಭಿಸಿ ಸಾರ್ವಜನಿಕರಿಗೆ ಓದುವ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ. ಅಲ್ಲದೆ ಗ್ರಾಮೀಣ ಜನತೆಗೆ 5766 ಗ್ರಾಮ ಪಂಚಾಯತಿ ಕೇಂದ್ರಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಿ ಗ್ರಂಥಾಲಯ ಸೇವೆ ನೀಡಲಾಗುತ್ತಿದೆ. ಹಾಗೆಯೇ ವೃದ್ದರು, ಮಹಿಳೆಯರಿಗಾಗಿ ಮನೆ ಬಾಗಿಲಲ್ಲೇ ಪುಸ್ತಕಗಳನ್ನು ಒದಗಿಸುವ ಸಲುವಾಗಿ 14 ಸಂಚಾರಿ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ. ಗ್ರಂಥಾಲಯಗಳ ಸುವ್ಯವಸ್ಥೆಗೆ ರಾಜ್ಯ/ಜಿಲ್ಲಾ ಹಾಗೂ ನಗರ ಗ್ರಂಥಾಲಯ ಪ್ರಾಧಿಕಾರಗಳು ಕಾರ್ಯನಿರ್ವಹಿಸುತ್ತಿದ್ದು, ತಮ್ಮ ವ್ಯಾಪ್ತಿಗೆ ಒಳಪಟ್ಟ ಯೋಜನೆಗಳನ್ನು ಸಿದ್ದಪಡಿಸಿ ಅವುಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡುತ್ತಿವೆ. ರಾಜ್ಯದ ಜನತೆಗೆ ಜ್ಞಾನ, ಸಾಮಾಜಿಕ ಶಿಕ್ಷಣ, ಮಾಹಿತಿ ಪ್ರಸಾರ ಹಾಗೂ ನಿರಂತರ ಕಲಿಕೆಗೆ ಒತ್ತಾಸೆ ನೀಡಿ ಸಾರ್ವಜನಿಕರಿಗೆ ಓದುವ ಸೌಲಭ್ಯ ಒದಗಿಸಿ ಅವರ ಸಾಕ್ಷರತಾ ಮಟ್ಟವನ್ನು ಹೆಚ್ಚಿಸಲು ಜೀವಂತ ಶಕ್ತಿಯಾಗಿ ಈ ವ್ಯವಸ್ಥೆ ಸಮಾಜಕ್ಕೆ ಸೇವೆ ಸಲ್ಲಿಸುತ್ತದೆ.

ಓದುವ ಸಮುದಾಯದ ಬೇಡಿಕೆಗಳನ್ನು ಗಮನದಲ್ಲಿರಿಸಿ ಗ್ರಂಥಾಲಯ ಸಂಪನ್ಮೂಲಗಳನ್ನು ಕ್ರೋಢೀಕರಿಸಲಾಗುತ್ತದೆ. ಓದುಗರ ವಾಸ್ತವ ಅವಶ್ಯಕತೆಗಳನ್ನು ಪರಿಗಣಿಸಿ ಪುಸ್ತಕ ಖರೀದಿಸಲು ಹೊಸ ಆಯಾಮವಾದ ಪುಸ್ತಕ ಖರೀದಿ ಪ್ರಕ್ರಿಯೆಗಾಗಿ ಸರ್ಕಾರದ ಆದೇಶದ ಮೇರೆಗೆ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ರಚನೆಯಾಗಿದ್ದು, ಗುಣಾತ್ಮಕ ಗ್ರಂಥಗಳ ಆಯ್ಕೆಯಲ್ಲಿ ನಿರತವಾಗಿದೆ.

ಇಲಾಖೆಯ ವೃತ್ತಿನಿರತ ಸಿಬ್ಬಂದಿಗಳಿಗೆ ಹಾಗೂ ಇತರ ಆಸಕ್ತರಿಗೆ ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ಶಾಲೆಯನ್ನು ಬೆಂಗಳೂರು ಹಾಗೂ ಧಾರವಾಡ ಕೇಂದ್ರಗಳಲ್ಲಿ ತೆರೆಯಲಾಗಿದೆ. ಗ್ರಂಥಾಲಯಗಳ ಬಗ್ಗೆ, ಓದುವ ಹವ್ಯಾಸದ ಬಗ್ಗೆ ಅಭಿರುಚಿ ಮೂಡಿಸಲು ವಿಸ್ತರಣಾ ಚಟುವಟಿಕೆಗಳನ್ನು ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರಿಗೆ ಕ್ಷಿಪ್ರವಾಗಿ ಮಾಹಿತಿ ಸೇವೆ ಒದಗಿಸಲು 30 ಜಿಲ್ಲಾ/ನಗರ ಗ್ರಂಥಾಲಯಗಳಲ್ಲಿ ಹಾಗೂ ನಿರ್ದೇಶಕರ ಕಛೇರಿಯಲ್ಲಿ ಗಣಕಯಂತ್ರಗಳನ್ನು ಅಳವಡಿಸಿ ಇಂಟರ್ನೆಟ್ ಹಾಗೂ ಇ-ಮೇಲ್ ವ್ಯವಸ್ಥೆ ಅಳವಡಿಸಲಾಗಿದೆ. ರಾಜ್ಯದಲ್ಲಿ ಪ್ರಸ್ತುತ ಸಾಲಿನಲ್ಲಿ 6 ಜಿಲ್ಲಾ / ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಗ್ರಂಥಗಳ ಗಣಕೀಕರಣ ಕಾರ್ಯಗಳಿಗೋಸ್ಕರ ರಾಜಾ ರಾಮ್ ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನ ಹಾಗೂ ಸರ್ಕಾರದ ಸಮಪಾಲು ನಿಧಿಯ ಅನುದಾನದ ಮೇರೆಗೆ ಗಣಕಯಂತ್ರಗಳನ್ನು ಖರೀದಿಸಿ ಅದರ ಕಾರ್ಯ ಪ್ರಾರಂಭಿಸಲಾಗುವುದು. 2010–11ನೇ ಸಾಲಿನಲ್ಲಿ ಸುವರ್ಣ ಕರ್ನಾಟಕ ವರ್ಷಾಚರಣೆಯ (2006) ಪ್ರಯುಕ್ತವಾಗಿ ಕರ್ನಾಟಕದಲ್ಲಿ ಪ್ರಕಟಗೊಂಡ ಒಂದು ಲಕ್ಷ ಕನ್ನಡ ಪುಸ್ತಕಗಳನ್ನು ಡಿಜಿಟೈಸ್ ಮಾಡಿಸಿ ಅಂತರ್ಜಾಲಕ್ಕೆ ಹಾಕಿದ್ದು ಈ ಕಾರ್ಯಕ್ರಮವನ್ನು ಮಾನ್ಯ ಮುಖ್ಯ ಮಂತ್ರಿಗಳು ಉದ್ಘಾಟಿಸಿರುತ್ತಾರೆ. ಅಂತರ್ಜಾಲಕ್ಕೆ ಸೇರ್ಪಡೆಯಾದ ಎಲ್ಲ ಪುಸ್ತಕಗಳನ್ನು ವಿಶ್ವದಾದ್ಯಂತ ಎಲ್ಲರೂ ಉಪಯೋಗಿಸಬಹುದಾಗಿದೆ.

## ಗ್ರಂಥಾಲಯ ಎಂದರೇನು?

ಗ್ರಂಥಾಲಯ ಸಾಂಪ್ರದಾಯಿಕವಾಗಿ, ಓದಲು ಅಥವಾ ಅಧ್ಯಯನಕ್ಕಾಗಿ ಬಳಸಲಾಗುವ ಪುಸ್ತಕಗಳ ಸಂಗ್ರಹ ಅಥವಾ ಅಂತಹ ಸಂಗ್ರಹವನ್ನು ಇರಿಸಲಾಗಿರುವ ಕಟ್ಟಡ ಅಥವಾ ಕೊಠಡಿ. ಈ ಪದವು ಲ್ಯಾಟಿನ್ ಲಿಬರ್, "ಪುಸ್ತಕ" ದಿಂದ ಬಂದಿದೆ, ಆದರೆ ಲ್ಯಾಟಿನ್ ಗ್ರೀಕ್ ಪದ, ಬಿಬ್ಲಿಯೊಥೆಕಾ, ಜರ್ಮನ್, ರಷ್ಯನ್ ಮತ್ತು ರೋಮನ್ ಭಾಷೆಗಳಲ್ಲಿ ಲೈಬ್ರರಿ ಎಂಬ ಪದದ ಮೂಲವಾಗಿದೆ.

'ಲೈಬ್ರರಿ' ಎಂಬ ಪದವು ಲ್ಯಾಟಿನ್ ಪದ"ಲೈಬ್ರೇರಿಯಾ" ದಿಂದ ಬಂದಿದೆ, ಇದರರ್ಥ "ಪುಸ್ತಕ ಸ್ಥಳ". ಇದು "ಲಿಬರ್" ಪದದಿಂದ ಹುಟ್ಟಿಕೊಂಡಿದೆ ಅಂದರೆ "ಪುಸ್ತಕ".

ಗ್ರಂಥಾಲಯವನ್ನು ಹೀಗೆ ವಿವರಿಸಬಹುದು:

ಪುಸ್ತಕಗಳನ್ನು ಇಡುವ ಕೋಣೆ;

ಸಾಹಿತ್ಯದ ದಾಖಲೆಗಳು ಮತ್ತು ದಾಖಲೆಗಳ ಸಂಗ್ರಹಗಳ ಉಲ್ಲೇಖಕ್ಕಾಗಿ ಮತ್ತು ಎರವಲು ಪಡೆಯುವುದಕ್ಕಾಗಿ ಇರಿಸಲಾಗುತ್ತದೆ;

ಪುಸ್ತಕ ಮತ್ತು ಇತರ ವಸ್ತುಗಳನ್ನು ಒಳಗೊಂಡಿರುವ ಒಂದು ಠೇವಣಿ;

ಪುಸ್ತಕಗಳ ಸಂಗ್ರಹವನ್ನು ಹೊಂದಿರುವ ಕಟ್ಟಡ.

## ವ್ಯಾಖ್ಯಾನಗಳು

ಎನ್ಸೈಕ್ಲೋಪೀಡಿಯಾ ಬ್ರಿಟಾನಿಕಾ ಪ್ರಕಾರ, "ಗ್ರಂಥಾಲಯವು ಮುದ್ರಣದಲ್ಲಿ ಅಥವಾ ಇತರ ರೂಪಗಳಲ್ಲಿ ಆಯೋಜಿಸಲಾದ ಮಾಹಿತಿ ಸಂಪನ್ಮೂಲಗಳ ಸಂಗ್ರಹವಾಗಿದೆ ಮತ್ತು ಓದಲು ಅಥವಾ ಅಧ್ಯಯನಕ್ಕಾಗಿ ಅವುಗಳನ್ನು ಉಪಯೋಗಿಸಬಹುದಾಗಿದೆ".

ಗ್ರಂಥಾಲಯ/ಲೈಬ್ರರಿ ಎನ್ನುವುದು "ವಸ್ತು, ಪುಸ್ತಕಗಳು ಅಥವಾ ಮಾಧ್ಯಮಗಳ ಸಂಗ್ರಹವಾಗಿದ್ದು, ಅದನ್ನು ಪ್ರದರ್ಶನದ ಉದ್ದೇಶಗಳಿಗಾಗಿ ಮಾತ್ರವಲ್ಲದೆ ಬಳಕೆಗೆ ಪ್ರವೇಶಿಸಬಹುದು". ಲೈಬ್ರರಿಯು ಭೌತಿಕ ಅಥವಾ ಡಿಜಿಟಲ್ ಪ್ರವೇಶ ಸಾಮಗ್ರಿಗಳನ್ನು ಒದಗಿಸುತ್ತದೆ, ಮತ್ತು ಭೌತಿಕ ಸ್ಥಳ ಅಥವಾ ವರ್ಚುವಲ್ ಸ್ಪೇಸ್ ಅಥವಾ ಎರಡೂ ಆಗಿರಬಹುದು.

ಗ್ರಂಥಾಲಯದ ವಿಧಗಳು
ಗ್ರಂಥಾಲಯವನ್ನು ಸ್ಥೂಲವಾಗಿ ಮೂರು ವರ್ಗಗಳಾಗಿ ವಿಂಗಡಿಸಬಹುದು

**೧. ಸಾರ್ವಜನಿಕ ಗ್ರಂಥಾಲಯ**: ಸಾರ್ವಜನಿಕ ಬಳಕೆಗಾಗಿ ಸಾಮಾನ್ಯವಾಗಿ ಸ್ಥಳೀಯ ತೆರಿಗೆಯಿಂದ ನಿರ್ವಹಿಸಲ್ಪಡುವ ಲಾಭೋದ್ದೇಶವಿಲ್ಲದ ಮತ್ತು ಯಾವುದೆ ವಯಸ್ಸು, ಲಿಂಗ, ವೃತ್ತಿ ಇತ್ಯಾದಿಗಳನ್ನು ಲೆಕ್ಕಿಸದೆ ಜನರಿಗೆ ಸೇವೆಗಳನ್ನು ಒದಗಿಸುತ್ತದೆ. ಉದಾ: ಭಾರತದ ರಾಷ್ಟ್ರೀಯ ಗ್ರಂಥಾಲಯ, ದೆಹಲಿ ಸಾರ್ವಜನಿಕ ಗ್ರಂಥಾಲಯ, ಇತ್ಯಾದಿ.

### ೨. ಶೈಕ್ಷಣಿಕ ಗ್ರಂಥಾಲಯ

ಶೈಕ್ಷಣಿಕ ಗ್ರಂಥಾಲಯವು ಉನ್ನತ ಶಿಕ್ಷಣ ಸಂಸ್ಥೆಗೆ ಲಗತ್ತಿಸಲಾದ ಗ್ರಂಥಾಲಯವಾಗಿದೆ ಮತ್ತು ಎರಡು ಪೂರಕ ಉದ್ದೇಶಗಳನ್ನು ಪೂರೈಸುತ್ತದೆ: ಪಠ್ಯಕ್ರಮ ಮತ್ತು ವಿಶ್ವವಿದ್ಯಾಲಯದ

ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಸಂಶೋಧನೆಯನ್ನು ಬೆಂಬಲಿಸಲು ಇದು ಅವಶ್ಯಕವಾಗಿದೆ.

ಉನ್ನತ ವ್ಯಾಸಂಗ ಸಂಸ್ಥೆಗಳ ಗ್ರಂಥಾಲಯಗಳು ಆ ಸಂಸ್ಥೆಗಳಷ್ಟೇ ವಿಭಿನ್ನ ರೀತಿಯಲ್ಲಿವೆ. ಕಿರಿಯ ಕಾಲೇಜುಗಳು, ಶಿಕ್ಷಕರ ಕಾಲೇಜುಗಳು, ಕೃಷಿ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು– ಈ ಎಲ್ಲ ಸಂಸ್ಥೆಗಳಲ್ಲೂ ಗ್ರಂಥಾಲಯಗಳಿವೆ. ಇವೇ ಅಲ್ಲದೆ ವಿಶ್ವವಿದ್ಯಾಲಯಗಳಲ್ಲಿ ಕೇಂದ್ರೀಕೃತ ಗ್ರಂಥಾಲಯಗಳನ್ನು ಅವುಗಳಿಗೆ ಸೇರಿದ ಕಾಲೇಜುಗಳ ವಿಶಿಷ್ಟ ಗ್ರಂಥಾಲಯಗಳೆಲ್ಲವನ್ನು ಒಟ್ಟಿಗೆ ಶೈಕ್ಷಣಿಕ ಗ್ರಂಥಾಲಯಗಳೆಂದು ಕರೆಯಬಹುದು.

### ೩. ವಿಶೇಷ ಗ್ರಂಥಾಲಯ

ವಿಶೇಷ ಗ್ರಂಥಾಲಯಗಳು ವಿಶೇಷವಾದ ಮಾಹಿತಿಯನ್ನು ಒದಗಿಸುತ್ತದೆ. ಅಂದರೆ, ನಿರ್ದಿಷ್ಟ ವರ್ಗದ ಬಳಕೆದಾರರಿಗೆ ನಿರ್ದಿಷ್ಟ ವಿಷಯದ ದಾಖಲೆಗಳು ಮತ್ತು ಸೇವೆಗಳು ಗ್ರಂಥಾಲಯದಲ್ಲಿ ಲಭ್ಯವಿರುತ್ತವೆ.

ಉದಾಹರಣೆ: ಕೃಷಿ ಸಂಶೋಧನಾ ಗ್ರಂಥಾಲಯ, ಅಂಗವಿಕಲರಿಗಾಗಿ ಗ್ರಂಥಾಲಯಗಳು. ಇತ್ಯಾದಿ.

### ಗ್ರಂಥಾಲಯದ ಕಾರ್ಯಗಳು

1. ಸಂಗ್ರಹವನ್ನು ನಿರ್ಮಿಸಿ ಮತ್ತು ಯಾರಿಗೆ ಪುಸ್ತಕಗಳು ಮತ್ತು ಇತರ ಪುಸ್ತಕೇತರ ವಸ್ತುಗಳ ಅಗತ್ಯವಿದೆ ಅವರಿಗೆ ಒದಗಿಸಬೇಕು;
2. ಜ್ಞಾನ, ಶಿಕ್ಷಣ ಮತ್ತು ಸಂಸ್ಕೃತಿಯ ಹರಡುವಿಕೆಯನ್ನು ಅಭಿವೃದ್ಧಿಪಡಿಸಲು ಮತ್ತು ಉತ್ತೇಜಿಸಲು ಸಹಾಯ ಮಾಡುತ್ತದೆ;
3. ಸಮುದಾಯದಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ, ಜೀವಿತಾವಧಿಯ ಸ್ವಯಂ ಶಿಕ್ಷಣಕ್ಕಾಗಿ ಸೌಲಭ್ಯವನ್ನು ಒದಗಿಸುವುದು;
4. ಎಲ್ಲಾ ವಿಷಯಗಳ ಬಗ್ಗೆ ನವೀಕೃತ ಸಂಗತಿಗಳು ಮತ್ತು ಮಾಹಿತಿಯನ್ನು ಎಲ್ಲರಿಗೂ ಒದಗಿಸುವುದು;
5. ವಯಸ್ಕರ ಸಾಕ್ಷರತಾ ಉಪಕ್ರಮಗಳಿಗೆ ಬೆಂಬಲ;
6. ಅವರ ವಯಸ್ಸು, ಜಾತಿ, ನಂಬಿಕೆ, ಧರ್ಮ, ಲೈಂಗಿಕತೆ, ವೃತ್ತಿಯನ್ನು ಲೆಕ್ಕಿಸದೆ ವಿವಿಧ ಬಳಕೆದಾರರಿಗೆ ವಿಶ್ವಾಸಾರ್ಹ ಮಾಹಿತಿಯನ್ನು ಒದಗಿಸುವುದು;
7. ಕ್ಷಣಿಕ ಸಂಸ್ಥೆಯ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಪುಸ್ತಕಗಳು ಮತ್ತು ಇತರ ಓದುವ ಸಾಮಗ್ರಿಗಳನ್ನು ಒದಗಿಸುವುದು;
8. ಬೋಧನಾ ಕೋರ್ಸ್‌ಗಳ ತಯಾರಿಯಲ್ಲಿ ಅಧ್ಯಾಪಕ ಸದಸ್ಯರಿಗೆ ಸಹಾಯ ಮಾಡಿ;
9. ಮಾಹಿತಿಯನ್ನು ಹುಡುಕಲು ಮತ್ತು ಪ್ರತಿಕ್ರಿಯಿಸಲು ಇಂಟರ್ನೆಟ್‌ಗೆ ಉಚಿತ ಪ್ರವೇಶದ ಮೂಲಕ ಉದ್ಯೋಗಾಕಾಂಕ್ಷಿಗಳಿಗೆ ಬೆಂಬಲ, ಉದ್ಯೋಗ ಅರ್ಜಿಗಳು, ಹಿಂದುಳಿದವರಿಗೆ ಬೆಂಬಲ;
10. ಸಮುದಾಯದಲ್ಲಿ ಸಂಸ್ಕೃತಿಯ ಪ್ರಗತಿಗೆ ಅನುಕೂಲ;
11. ಸಾಹಿತ್ಯ ಕೃತಿಗಳು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಿ;
12. ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಬೆಂಬಲಿಸುತ್ತದೆ;
13. ಮನರಂಜನಾ ಅಗತ್ಯಗಳನ್ನು ಪೂರೈಸುವುದು ಮತ್ತು ಬಿಡುವಿನ ಸಮಯದ ಬಳಕೆ;

### ಶಿಕ್ಷಣದಲ್ಲಿ ಗ್ರಂಥಾಲಯಗಳ ಪಾತ್ರ:

ಶತ ಶತಮಾನಗಳಿಂದ ಸಂಗ್ರಹಗೊಂಡಿರುವ ಜ್ಞಾನ ನಿಧಿಗಳೇ ಗ್ರಂಥಾಲಯಗಳು, ಗ್ರಂಥಾಲಯಗಳಿಲ್ಲದ ಶಾಲಾ ಕಾಲೇಜುಗಳು, ಮರುಭೂಮಿಗಳಿದ್ದಂತೆ: ಗ್ರಂಥಾಲಯಗಳಿಲ್ಲದ, "ಮಹಾಕೃತಿಯೊಂದು ಮಹಾ ಚೈತನ್ಯವೊಂದರ ಸರ್ವಸ್ವವಾಗಿದ್ದು, ಇಂದಿನ ಬದುಕಿಗೆ ಮಾತ್ರವಲ್ಲ ಮುಂದಿನ ಬದುಕಿಗೂ ಸಹ ಅತ್ಯವಶ್ಯಕವಾದ ಸಾರವನ್ನುಳಿಸಿ, ರಕ್ಷಿಸುವ ಶಕ್ತಿ ಮಾತ್ರುಕೆಯೆಂದು" ಮಿಲ್ಟನ್ ನುಡಿದಿದ್ದಾರೆ. "ಇದು ಮಾನವನನ್ನು ಪೂರ್ಣ ಮಾನವನನ್ನಾಗಿ ಪರಿವರ್ತಿಸುತ್ತದೆಂದು" ಬೇಕನ್ ಸ್ಪಷ್ಟಪಡಿಸಿದ್ದಾರೆ. ಜಗತ್ತಿನ ಚಲನೆಗೆ ಭಾವನೆಗಳೇ ವಿದ್ಯುತ್; ಗ್ರಂಥಗಳೇ ಆ ವಿದ್ಯುತ್ತನ್ನು ಸೃಷ್ಟಿ ಮಾಡುವ ವಿದ್ಯುದಾಗರಗಳು, ಉತ್ತಮ ಗ್ರಂಥಗಳಿಗೆ ಯಾವಾಗಲೂ ಮುಪ್ಪಿಲ್ಲ. ಅವು "ಯೌವ್ವನದ ಆಹಾರ, ಮುಪ್ಪಿನ ಆನಂದ, ದೌರ್ಬಲ್ಯದ ವಿಟಮಿನ್" ಎಂದು ಬಲ್ಲವರು ಹೇಳುತ್ತಾರೆ. ಇಂದಿನ ನಿಜವಾದ ಆಸ್ತಿ ಭೂಮಿಯಲ್ಲ, ಚಿನ್ನವಲ್ಲ, ಜ್ಞಾನ ನಿಧಿಗಳಾದ ಗ್ರಂಥರಾಶಿಗಳು. 'ಆನಂದ ಬೇಕಾದರೆ ಗ್ರಂಥಗಳನ್ನು ಸಂಗ್ರಹಿಸು' ಎಂಬ ಗಾದೆಯೂ ಉಂಟು, ಹಾಗೆಯೇ 'ಹಳೆಯ ಕೋಟನ್ನಾದರೂ ಧರಿಸು ಆದರೆ ಹೊಸ ಪುಸ್ತಕವನ್ನೇ ಕೊಳ್ಳು' ಹಾಗೂ 'ಮಕ್ಕಳಿಗೆ ಆಸ್ತಿ ಮಾಡದಿದ್ದರೂ ಪರವಾಗಿಲ್ಲ ಮಕ್ಕಳನ್ನೇ ಆಸ್ತಿಯಾಗಿ ಮಾಡು' ಎಂಬ ಸೂಕ್ತಿಗಳೂ ಕೂಡ ಜಗಜ್ಜಾಹೀರಾಗಿದೆ.

ಇವೆಲ್ಲವುಗಳು ಗ್ರಂಥಾಲಯಗಳ ಮಹತ್ವವನ್ನು ಸಾರುತ್ತವೆ.

ಓದಿನಿಂದ ಅರಿವು ಮೂಡುತ್ತದೆ; ಮಾನವನ ಬೌದ್ಧಿಕ ಶಕ್ತಿ ಸಾಮರ್ಥ್ಯ ಪ್ರತಿಭೆಗಳ ವಿಶ್ವಾಸಕ್ಕೆ ಓದು ಪ್ರಚೋದನೆಯನ್ನು ಒದಗಿಸುತ್ತದೆ ಮತ್ತು ಚಿಂತನಾ ಕೌಶಲ ವೃದ್ಧಿಯಾಗುತ್ತದೆ. ವಿಜ್ಞಾನ ಶಿಕ್ಷಣದ ಯಶಸ್ಸಿಗೆ ಪ್ರಯೋಗಶಾಲೆ ಎಷ್ಟು ಮುಖ್ಯವೋ, ಹಾಗೆ ಶಿಕ್ಷಣದ ಶ್ರೇಯಸ್ಸಿಗೆ ಗ್ರಂಥಾಲಯವು ಅಗತ್ಯ ಮತ್ತು ಅನಿವಾರ್ಯವಾದ ಅವಿಭಾಜ್ಯ ಅಂಗ ಎಂಬುದಾಗಿ ಹಿರಿಯರು ಅರ್ಥೈಸಿದ್ದಾರೆ. ಗ್ರಂಥಾಲಯವು ಸೇವಾ ಸಂಸ್ಥೆಯೂ ಸಹ ಹೌದು. ಓದುಗರೆಂಬ ಗ್ರಾಹಕರು ಹೆಚ್ಚಿದಷ್ಟು ಅಗತ್ಯಗಳನ್ನು ಪೂರೈಸುವುದು ಸಂಸ್ಥೆಯ ಮುಖ್ಯಸ್ಥರ ಮತ್ತು ಗ್ರಂಥಾಲಯದ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

ಮಾಹಿತಿ ತಂತ್ರಜ್ಞಾನವು ದಿನದಿನಕ್ಕೆ ಉತ್ತುಂಗಕ್ಕೆರುತ್ತಿದೆ. ಜಗತ್ತಿನ ಪ್ರತಿಯೊಂದು ಕ್ಷೇತ್ರದಲ್ಲಿಯೂ ನಿರಂತರವಾಗಿ ಬದಲಾವಣೆಗಳು ನಡೆಯುತ್ತಿವೆ. ಅವು ಹಳ್ಳಿಗಾಡಿನ ಸಾಮಾನ್ಯ ಜನರ ಜೀವನ ವ್ಯವಹಾರಗಳ ಮೇಲೂ ಪ್ರಭಾವ ಬೀರುತ್ತಿವೆ. ಆದ್ದರಿಂದ ಇಂದಿನ ಬದಲಾವಣೆ ಇಂದೇ ಎಲ್ಲರನ್ನು ಮುಟ್ಟಲು ವ್ಯವಸ್ಥೆ ಮಾಡುವುದು ಅತ್ಯಂತ ಸೂಕ್ತ ಮತ್ತು ಅಗತ್ಯವಾಗಿದೆ. ಜ್ಞಾನವೆಂಬುದು ಶುಚಿತ್ವವನ್ನುಳಿಸಿಕೊಂಡು, ನಿತ್ಯ ನೂತನವಾಗಲು ಸದಾ ವಾಹಿನಿಯಂತೆ ಹರಿಯುತ್ತಿರಬೇಕೇ ಹೊರತು ಅದು ಮಡುಗಟ್ಟಬಾರದು. ಶಿಕ್ಷಣದ ಧ್ಯೇಯವು ಜ್ಞಾನಲಾಭವೆ ಆಗಿರುತ್ತದೆ. ಈ ಜ್ಞಾನದ ಅಕ್ಷಯ ನಿಧಿಗಳೇ ಹಾಗೂ ಪ್ರಾಚೀನ ಅರ್ವಾಚೀನ ತಪಸ್ವಿಗಳ ಚೈತನ್ಯ ಚಿಲುಮೆಗಳೇ ಈ ಗ್ರಂಥಾಲಯಗಳು. ಆದ್ದರಿಂದ ಶಿಕ್ಷಣ ಮತ್ತು ಗ್ರಂಥಾಲಯಗಳಿಗೆ ಹೊಕ್ಕುಳ ಬಳ್ಳಿಯಂತಹ ಸಂಬಂಧವಿದೆಯೆಂಬುದು ನಿಜಕ್ಕೂ ಸತ್ಯ.

## ಗ್ರಂಥಾಲಯಗಳಿಗೆ ಸರ್ಕಾರದ ನೆರವು:

ಗ್ರಂಥಾಲಯಗಳಿಗೆ ನೆರವು ಕೊಡುವಲ್ಲಿ ಸರ್ಕಾರದ ಪಾತ್ರವು ಬಹುಮುಖ್ಯವಾಗಿದೆ. ಇದೇ ಅಲ್ಲದೆ ಸರ್ಕಾರದ ವಿವಿಧ ಕಚೇರಿಗಳು ಹಾಗೂ ನಿಯೋಗಗಳು ತಮ್ಮ ನಿಯತಕಾರ್ಯಕ್ರಮಗಳ ಅಂಗವಾಗಿ ಗ್ರಂಥಾಲಯಗಳಿಗೆ ನೆರವನ್ನೊದಗಿಸುತ್ತಿವೆ. ಉದಾಹರಣೆಗೆ ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನ ಪ್ರಚಲಿತ ಸಂಶೋಧನೆಗಳ ಮೇಲಿನ ಮಾಹಿತಿಗಳನ್ನು ವಿಜ್ಞಾನಿಗಳಿಗೆ ಮುಟ್ಟುವಂತೆ ಮಾಡಲು ಇರುವ ಸಾಧನಗಳನ್ನು ವಿಸ್ತರಿಸಲು ಹಾಗೂ ಉತ್ತಮಪಡಿಸಲು ಕಾರ್ಯಕ್ರಮಗಳನ್ನು ಸ್ವತಃ ಕೈಗೊಂಡಿದೆ ಹಾಗೂ ಪ್ರೋತ್ಸಾಹಿಸುತ್ತಿದೆ. 1895ರಲ್ಲಿ ಕಾಂಗ್ರೆಸ್ ಒಂದು ಕಾಯದೆಯನ್ನು ಹೊರತಂದು ವಿವಿಧ ರೀತಿಯ 637 ಗ್ರಂಥಾಲಯಗಳನ್ನು ಠೇವಣಿ ಗ್ರಂಥಾಲಯ (ಡೆಪಾಸಿಟರಿ ಲೈಬ್ರರೀಸ್) ಗಳನ್ನಾಗಿ ಮಾರ್ಪಡಿಸಿತು. ಇದರ ಪ್ರಕಾರ ಸರ್ಕಾರದ ಎಲ್ಲ ಪ್ರಕಟಣೆಗಳೂ ಈ ಎಲ್ಲ ಗ್ರಂಥಾಲಯಗಳಲ್ಲಿ ಕಡ್ಡಾಯವಾಗಿ ದಾಸ್ತಾನಾಗುತ್ತವೆ. ಇಷ್ಟೇ ಅಲ್ಲದೆ, ಅವನ್ನು ದೇಶದ ಸಂಶೋಧಕರಿಗೆ ಅವಶ್ಯವಾದಲ್ಲಿ ಈ ಗ್ರಂಥಾಲಯಗಳು ಒದಗಿಸಬೇಕೆಂದೂ ಕಾಯಿದೆ ನಿಯಮಿಸಿದೆ. ಅನೇಕ ವರ್ಷಗಳಿಂದ ಸರ್ಕಾರದ ಶಿಕ್ಷಣ ಕಚೇರಿ ಗ್ರಂಥಾಲಯಗಳ ಸ್ಥಿತಿಗತಿಗಳ ಬಗ್ಗೆ ಅಂಕಿಸಂಖ್ಯೆಗಳನ್ನು ಸಂಗ್ರಹಿಸಿ ವರದಿಗಳನ್ನು ಪ್ರಕಟಿಸುತ್ತಿದೆ. ಈ ಕಚೇರಿಯ ಅಂಗವಾಗಿ 1937ರಲ್ಲಿ ಅಸ್ತಿತ್ವಕ್ಕೆ ಬಂದ ಗ್ರಂಥಾಲಯ ಸೌಕರ್ಯ ಶಾಖೆ (ಲೈಬ್ರರಿ ಸರ್ವಿಸಸ್ ಬ್ರ್ಯಾಂಚ್) ಗ್ರಂಥಾಲಯ ಸಂಘಗಳು, ಸರ್ಕಾರಿ ನಿಯೋಗಗಳು, ಶಿಕ್ಷಣತಜ್ಞರು ಹಾಗೂ ಶ್ರೇಷ್ಠ ಗ್ರಂಥಾಲಯ ವಿಜ್ಞಾನಿಗಳೊಡನೆ ಸಹಕರಿಸಿ ವಿವಿಧ ರೀತಿಯ ಗ್ರಂಥಾಲಯಗಳ ಸಂಗ್ರಹಣೆ ಮತ್ತು ಸೌಕರ್ಯಗಳನ್ನು ವಿಸ್ತರಿಸಲು ಎಲ್ಲ ರೀತಿಯ ಸಹಾಯವನ್ನೊದಗಿಸುತ್ತಿದೆ

1956ನೆಯ ವರ್ಷದಲ್ಲಿ ಜಾರಿಗೆ ಬಂದ ಗ್ರಂಥಾಲಯ ಸೌಕರ್ಯಗಳ ಕಾಯಿದೆಯನ್ನು 1962ರ ಠೇವಣಿ ಗ್ರಂಥಾಲಯ ಕಾಯಿದೆ, 1963ರ ಉನ್ನತ ಶಿಕ್ಷಣ ಸೌಕರ್ಯಗಳ ಕಾಯಿದೆ 1965ರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕಾಯಿದೆ ಮತ್ತು 1965ರ ಉನ್ನತ ಶಿಕ್ಷಣ ಕಾಯಿದೆಗಳು ಹಿಂಬಾಲಿಸಿದವು. ಇವೆಲ್ಲ ಪರೋಕ್ಷವಾಗಿ ಗ್ರಂಥಾಲಯಗಳ ಬೆಳವಣಿಗೆಗೆ ನೆರವಾದುದೇ ಅಲ್ಲದೆ, ಗ್ರಂಥಗಳ ಸಂಗ್ರಹಣೆ ಹಾಗೂ ಸೌಕರ್ಯಗಳ ವಿಸ್ತರಣೆಗೆ ಸಂಬಂಧಪಟ್ಟಂತೆ ನಿರ್ದಿಷ್ಟ ನಿಬಂಧನೆಗಳನ್ನೊಳಗೊಂಡಿದ್ದವು. ಇವುಗಳಲ್ಲಿ ಶೈಕ್ಷಣಿಕ ಮತ್ತು ಸಂಶೋಧನ ಗ್ರಂಥಾಲಯಗಳ ಮೇಲೆ ಅತಿಹೆಚ್ಚಿನ ಪ್ರಭಾವ ಬೀರಿದ ಉನ್ನತ ಶಿಕ್ಷಣ ಕಾಯಿದೆಯ ಪ್ರಕಾರ ಗ್ರಂಥಾಲಯ ಈ ಎರಡು ಕಾರ್ಯಗಳಿಗೆ ಬದ್ಧವಾಗಬೇಕಾಯಿತು : (1) ಸಾಧ್ಯವಾದಷ್ಟು

ಮಟ್ಟಿಗೆ ಪ್ರಪಂಚದ ಎಲ್ಲೆಡೆ ಪ್ರಕಟವಾದ ಮತ್ತು ಸಂಶೋಧನೆಗೆ ನೆರವಾಗುವ ಎಲ್ಲ ಗ್ರಂಥಗಳನ್ನೂ ಸಂಗ್ರಹಿಸುವುದು, (2) ಈ ರೀತಿ ಸಂಗ್ರಹಿಸಿದ ಎಲ್ಲ ಗ್ರಂಥಗಳನ್ನೂ ಸೂಚೀಕರಿಸಿ, ಸೂಚೀರೇಖೆಯನ್ನು ವಿವಿಧ ಗ್ರಂಥಾಲಯಗಳಿಗೆ ಒದಗಿಸುವುದು. ಗ್ರಂಥಾಲಯ ಚಳವಳಿಯಲ್ಲಿ ಸರ್ಕಾರ ಮಾಡಿದ್ದ ಇನ್ನೊಂದು ದೊಡ್ಡ ಕೆಲಸವೆಂದರೆ 1966ರಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಲಹಾ ಸಮಿತಿಯನ್ನು ನೇಮಿಸಿದ್ದು. ಶ್ರೇಷ್ಠ ಶಿಕ್ಷಣತಜ್ಞರು, ಗ್ರಂಥಪಾಲರು, ಗ್ರಂಥಾಲಯ ವಿಜ್ಞಾನಿಗಳು ಸದಸ್ಯರಾಗಿರುವ ಈ ಸಮಿತಿ ಗ್ರಂಥಾಲಯಗಳ ಪಾತ್ರವನ್ನು ವಿಮರ್ಶಿಸಿ ಅವುಗಳ ಬೆಳವಣಿಗೆಗೆ ಸಲಹೆಗಳನ್ನೀಯುತ್ತದೆ.

## ಗ್ರಂಥಾಲಯದಲ್ಲಿ ಕಂಡುಬರುತ್ತಿರುವ ಇತ್ತೀಚಿನ ಪ್ರವೃತ್ತಿಗಳು:

1. **ಲೈಬ್ರರಿ ವೃತ್ತಿಪರರಿಂದ ಮಾಹಿತಿ ವೃತ್ತಿಪರರಿಗೆ:** ಗ್ರಂಥಪಾಲಕರ ಕೆಲಸ ಈಗ ಕೇವಲ ಪುಸ್ತಕಗಳ ಪ್ರಸರಣಕ್ಕೆ ಸೀಮಿತವಾಗಿಲ್ಲ ಆದರೆ ನಿಖರತೆಯನ್ನು ಒದಗಿಸುತ್ತದೆ.ಸರಿಯಾದ ಬಳಕೆದಾರರಿಗೆ ಮಾಹಿತಿ. ಡಿಜಿಟಲೀಕರಣದ ಯುಗದಲ್ಲಿ, ದಾಖಲೆಗಳು ಈಗ ಲಭ್ಯವಿವೆ. ಇ-ಫಾರ್ಮ್ಯಾಟ್‌ಗಳಲ್ಲಿ ಮತ್ತು ಲೈಬ್ರರಿ ಆಟೋಮೇಷನ್ ಪ್ರತಿ ಲೈಬ್ರರಿಗೆ ಅತ್ಯಗತ್ಯವಾಗಿರುತ್ತದೆ.
2. **ಸಾಂಪ್ರದಾಯಿಕ ಗ್ರಂಥಾಲಯಗಳಿಂದ ಡಿಜಿಟಲ್ ಗ್ರಂಥಾಲಯಗಳಿಗೆ:** ಮಾಹಿತಿ ತಂತ್ರಜ್ಞಾನದ ಯುಗದಲ್ಲಿ, ಡಿಜಿಟಲ್ ದಾಖಲೆಗಳು ಕೇವಲ ಮುದ್ರಿತ ದಾಖಲೆಗಳ ಬದಲಿಗೆ ಮುದ್ರಿತ ಪುಸ್ತಕಗಳೊಂದಿಗೆ ಸಹ ಅಸ್ತಿತ್ವದಲ್ಲಿರುತ್ತವೆ. ಸಾಂಪ್ರದಾಯಿಕ ಗ್ರಂಥಾಲಯಗಳಲ್ಲಿ ಲಭ್ಯವಿತ್ತು. ಡಿಜಿಟಲ್ ಅಭಿವೃದ್ಧಿಪಡಿಸಲು ಉಪಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಭಾರತದಲ್ಲಿ ಗ್ರಂಥಾಲಯಗಳು. ಆಧುನಿಕ ಗ್ರಂಥಾಲಯಗಳು ಹಲವಾರು ಇ-ಜರ್ನಲ್‌ಗಳು ಮತ್ತು ಇ-ಪುಸ್ತಕಗಳಿಗೆ ಚಂದಾದಾರರಾಗುತ್ತವೆ. ಇಂಟರ್ನೆಟ್ ಮೂಲಕ ಬಳಕೆದಾರರಿಗೆ ಅನುಕೂಲ. ಉದಾಹರಣೆ: INFLIBNET ನ N-LIST.
3. **ಸಂಪನ್ಮೂಲ ಹಂಚಿಕೆ ನೆಟ್‌ವರ್ಕ್‌ಗಳು/ಕನ್ಸೋರ್ಟಿಯಮ್‌ಗೆ ಲೈಬ್ರರಿ ಸಹಕಾರ:** ಯಾವುದೇ ಲೈಬ್ರರಿ ಇಲ್ಲ. ಪ್ರತಿಯೊಂದು ದಾಖಲೆಯನ್ನು ಸರಿಹೊಂದಿಸಲು ಸಾಕಷ್ಟು ಸ್ವಾವಲಂಬಿಯಾಗಿದೆ. ಮುಂತಾದ ಕೆಲವು ಸಮಸ್ಯೆಗಳು ಸ್ಥಳಾವಕಾಶ, ಸೀಮಿತ ನಿಧಿ, ದಾಖಲೆಗಳ ಹೆಚ್ಚಿದ ಬೆಲೆ ಇತ್ಯಾದಿಗಳು ಎಲ್ಲವನ್ನೂ ಸ್ವಾಧೀನಪಡಿಸಿಕೊಳ್ಳಲು ಗ್ರಂಥಾಲಯವನ್ನು ನಿರ್ಬಂಧಿಸುತ್ತದೆ ದಾಖಲೆಗಳು. ಅಂತಹ ಸಂದರ್ಭದಲ್ಲಿ, ತಮ್ಮ ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಗ್ರಂಥಾಲಯಗಳ ನಡುವೆ ಒಕ್ಕೂಟ ಅಥವಾ ನೆಟ್ ವರ್ಕ್ ಅನ್ನು ಅಭಿವೃದ್ಧಿಪಡಿಸಲಾಗುತ್ತದೆ. ಉದಾಹರಣೆ: INFLIBNET, UGC-INFONET, ಇ-ಜರ್ನಲ್ ಒಕ್ಕೂಟ.
4. **ಸಂಗ್ರಹಣೆಯ ಅಭಿವೃದ್ಧಿಯಿಂದ ವಿಷಯ ಅಭಿವೃದ್ಧಿಗೆ:** ಸರಿಯಾದ ಸಂಗ್ರಹ ಬಳಕೆದಾರರ ಅಗತ್ಯಗಳನ್ನು ಪೂರೈಸಲು ದಾಖಲೆಗಳನ್ನು ಅಭಿವೃದ್ಧಿಪಡಿಸಬೇಕು. ಗ್ರಂಥಾಲಯಗಳು ಮೌಲ್ಯಮಾಪನ ಮಾಡಬೇಕು ಮತ್ತು ಬಳಕೆದಾರರ ಅಗತ್ಯವನ್ನು ಗುರುತಿಸಿ ಮತ್ತು ಅದಕ್ಕೆ ಅನುಗುಣವಾಗಿ ಸಂಗ್ರಹವನ್ನು ನಿರ್ಮಿಸಬೇಕು, ಇದರಿಂದ ವಿಷಯ ಬಳಕೆದಾರರನ್ನು ತೃಪ್ತಿಪಡಿಸುತ್ತದೆ.

## ಶೈಕ್ಷಣಿಕ ಸಂಸ್ಥೆಗಳ ಗ್ರಂಥಪಾಲಕಗಿರುವ ಸವಾಲುಗಳು

1. **ಸಂಪನ್ಮೂಲಗಳ ಕ್ರೋಡಿಕರಣ ಮತ್ತು ವರ್ಗೀಕರಣ:** ಒಬ್ಬ ಗ್ರಂಥಪಾಲಕನಿಗೆ ತಾನಿರುವ ಸಂಸ್ಥೆಗೆ ಅವಶ್ಯವಿರುವ ಮಾಹಿತಿ ಸಂಪನ್ಮೂಲಗಳ ಸ್ಪಷ್ಟ ಚಿತ್ರಣವಿದ್ದಲ್ಲಿ ಅದಕ್ಕೆ ತಕ್ಕ ಗ್ರಂಥಾಲಯ ಅಭಿವೃದ್ಧಿಪಡಿಸುವುದು ಕಷ್ಟವಾಗುವುದಿಲ್ಲ. ಖಂಡಿತವಾಗಿ ಗ್ರಂಥಾಲಯಗಳಿಗೆ ಬಜೆಟ್ ಕಡಿತ ಹಾಗೂ ಸಿಬ್ಬಂದಿ ಕಡಿತದಂತಹ ಸಮಸ್ಯೆಗಳು ಈಗ ಸಾಮಾನ್ಯ. ಆದರೆ ಇತ್ತೀಚಿನ ಅಂತರ್ಜಾಲದಲ್ಲಿ ವಿಜ್ಞಾನ, ಇತಿಹಾಸ, ತಂತ್ರಜ್ಞಾನ, ಕಲೆ, ಸಾಹಿತ್ಯ ಹಾಗೂ ಎಲ್ಲ ವಿಷಯಗಳ ಕುರಿತು ಇ–ಬುಕ್ಸ್, ಡೇಟಾಬೇಸ್ ಮತ್ತು ಜರ್ನಲ್ಸ್ ಹೀಗೆ ಹಲವಾರು ಸಂಪನ್ಮೂಲಗಳು ಉಚಿತವಾಗಿ ಲಭ್ಯವಿದ್ದು, ಅವುಗಳ ಪ್ರಯೋಜನ ಪಡೆಯಬಹುದು.
2. **ವಿದ್ಯಾರ್ಥಿ ಮತ್ತು ಪ್ರಾಧ್ಯಾಪಕರೊಂದಿಗೆ ಸಂವಹನ ಕೊರತೆ:** ಇವತ್ತಿಗೂ ಹೆಚ್ಚಿನ ವಿದ್ಯಾರ್ಥಿಗಳು ಗ್ರಂಥಾಲಯಕ್ಕೆ ಹೋಗುವುದು

ಪರಸ್ಪರ ಭೇಟಿಯಾಗಲಿಕ್ಕೆ ಮಾತ್ರ. ವಿದ್ಯಾರ್ಥಿ ಮತ್ತು ಗ್ರಂಥಪಾಲಕರ ನಡುವಿನ ಸಂವಹನ ಕೊರತೆಯಿಂದಾಗಿ ಗ್ರಂಥಾಲಯದಲ್ಲಿ ಲಭ್ಯವಿರುವ ಸೌಲಭ್ಯಗಳ ಕುರಿತು ಗೊತ್ತಾಗುವುದೆ ಇಲ್ಲ. ಅದೇ ರೀತಿ ಪ್ರಾಧ್ಯಾಪಕರು ಸಹ ಗ್ರಂಥಾಲಯಗಳ ಉಪಯೋಗ ಪಡೆದುಕೊಳ್ಳುವುದು ತುಂಬಾ ಕಡಿಮೆ. ಸ್ಮಾರ್ಟ್ ಫೋನ್ ಪೀಳಿಗೆಯ ಈ ಯುಗದಲ್ಲಿ ಗ್ರಂಥಾಲಯಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಬೇಕಾದಲ್ಲಿ ಗ್ರಂಥಪಾಲಕರೇ ವಿದ್ಯಾರ್ಥಿಗಳಿರುವಲ್ಲಿ ಹೋಗಬೇಕು. ಈ ನಿಟ್ಟಿನಲ್ಲಿ ಕೆಲವು ವಿನೂತನ ಪ್ರಯೋಗಗಳನ್ನು ಮಾಡುವುದು ಅನಿವಾರ್ಯ

3. ಪ್ರಥಮವಾಗಿ ಕಾಲೇಜಿನ ಪ್ರಾಧ್ಯಾಪಕರಿಗೆ ಗ್ರಂಥಾಲಯದಲ್ಲಿ ಲಭ್ಯವಿರುವ ಸೌಲಭ್ಯವಿರುವ ಕುರಿತು ಸಂಪೂರ್ಣ ಮಾಹಿತಿ ನೀಡುವುದು ಮತ್ತು ಅವರು ಕಲಿಸುವ ವಿಷಯಗಳ ಬಗ್ಗೆ ಗ್ರಂಥಾಲಯದಲ್ಲಿ ಹೊಸದಾಗಿ ಬರುವ ಪುಸ್ತಕ ಮತ್ತು ನಿಯತಕಾಲಿಕೆಗಳ ಕುರಿತು ಮಾಹಿತಿ ನೀಡುವುದು. ಗ್ರಂಥಾಲಯದ ಸದುಪಯೋಗ ಪಡೆದುಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಪ್ರೇರೇಪಿಸುವಂತೆ ಕೇಳಿಕೊಳ್ಳುವುದು.
4. ಶೈಕ್ಷಣಿಕ ವರ್ಷದ ಆರಂಭದಲ್ಲಿ ಬರುವ ಹೊಸ ವಿದ್ಯಾರ್ಥಿಗಳಿಗೆ ಗ್ರಂಥಾಲಯದ ಪರಿಚಯ ಮತ್ತು ಅದರ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳಲು ಅನುಕೂಲವಾಗುವಂತಹ ತರಬೇತಿ ನೀಡುವುದು. ವಿಶೇಷವಾಗಿ ಡಿಜಿಟಲ್ ಡೇಟಾಬೇಸ್ ಮತ್ತು ಅನ್ ಲೈನ್ ನಿಯತಕಾಲಿಕೆಗಳನ್ನು ಬಳಸುವ ತರಬೇತಿ ನೀಡುವುದು. ಸಾಧ್ಯವಾದಲ್ಲಿ ಸಂಸ್ಥೆಯ ವೆಬ್ ಸೈಟ್ ನಲ್ಲಿ ಗ್ರಂಥಾಲಯ ವಿಭಾಗದಲ್ಲಿ ಇದರ ಕುರಿತು ವಿಡಿಯೋ ಮತ್ತು ಈಂಕಿ ಗಳನ್ನು ಒದಗಿಸುವುದು.
5. ಶೈಕ್ಷಣಿಕ ವರ್ಷದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಸೆಮಿನಾರ್ ಸಿದ್ಧತೆಗೆ ಮತ್ತು ಪ್ರಾಜೆಕ್ಟ್ ಪೂರ್ಣಗೊಳಿಸಲು ಸಹಾಯ ಮಾಡುವುದು. ಸಂಶೋಧನಾ ವಿದ್ಯಾರ್ಥಿಗಳಾಗಿದ್ದರೆ ಮೇಲೆ ತಿಳಿಸಿದಂತೆ ಡಿಜಿಟಲ್ ಸಾಕ್ಷರತೆ ತುಂಬಾ ಅವಶ್ಯಕವಾಗಿದೆ. ಅಂತರ್ಜಾಲ ಅಥವಾ ಡೇಟಾಬೇಸ್ ಉಪಯೋಗಿಸಿ ಸರಿಯಾದ ಮಾಹಿತಿ ಹುಡುಕಲು ಮತ್ತು ಅವುಗಳ ಮೂಲ ತಿಳಿದು ಪರಾಮರ್ಶಿಸಲು ಸಹಾಯ ಮಾಡುವುದು. ಮುಖ್ಯವಾಗಿ ಕೃತಿ ಚೌರ್ಯದ ಕುರಿತು ತಿಳಿವಳಿಕೆ ಮೂಡಿಸುವುದು.

ಇದನ್ನೆಲ್ಲಾ ಸಮರ್ಥವಾಗಿ ನಿರ್ವಹಿಸುವ ಪ್ರತಿಭೆ ಗ್ರಂಥಪಾಲಕರಲ್ಲಿದೆಯೆಂಬ ವಿಶ್ವಾಸ ವಿದ್ಯಾರ್ಥಿ ಮತ್ತು ಪ್ರಾಧ್ಯಾಪಕರಲ್ಲಿ ಬಂದಾಗ ಮಾತ್ರ ಡಿಜಿಟಲ್ ಯುಗದಲ್ಲಿ ಗ್ರಂಥಾಲಯಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯ.

**ಉಪಸಂಹಾರ**:

ಯಾವುದೇ ಸಮಾಜದ ಪ್ರಗತಿಗೆ ಶಿಕ್ಷಣ ಬೆನ್ನೆಲುಬು. ಶಿಕ್ಷಣದಲ್ಲಿ ಸಂಶೋಧನೆ, ವ್ಯಕ್ತಿತ್ವ ವಿಕಸನ, ನೈತಿಕತೆ ಮತ್ತು ಗುಣಮಟ್ಟವನ್ನು ಉತ್ತೇಜಿಸುವಲ್ಲಿ ಗ್ರಂಥಾಲಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಸರಿಯಾದ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣವಿಲ್ಲದೆ ಸಮಾಜದ ಅಭಿವೃದ್ಧಿ ಸಾಧ್ಯವಿಲ್ಲ. ಗ್ರಂಥಾಲಯಗಳು ಓದುವ ಸಾಮಗ್ರಿಗಳನ್ನು ಸಂಘಟಿಸಿ, ಸಂರಕ್ಷಿಸಿ ಮತ್ತು ಬಳಕೆದಾರರಿಗೆ ಮಾಹಿತಿಯನ್ನು ಪ್ರಸಾರ ಮಾಡುವ ಮೂಲಕ ಸಮಾಜದ ಅಭಿವೃದ್ಧಿಕಾರ್ಯಗೈಯುತ್ತಿವೆ. ಈ ನಿಟ್ಟಿನಲ್ಲಿ ಗ್ರಂಥಾಲಯಗಳ ಪ್ರಾಮುಖ್ಯತೆ ಮತ್ತು ಪಾತ್ರ ಹಿರಿದು ಎಂಬುದು ತಿಳಿದುಬರುತ್ತದೆ.

ಈ ಹಿಂದೆ ವಿದ್ಯಾರ್ಥಿಗಳು ಅದರಲ್ಲೂ ವಿಶೇಷವಾಗಿ ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಹೆಚ್ಚಿನ ಸಮಯವನ್ನು ಗ್ರಂಥಾಲಯದಲ್ಲಿ ಕಳೆಯುತ್ತಿದ್ದರು. ಮಾಹಿತಿ ತಂತ್ರಜ್ಞಾನದಲ್ಲಿ ಕ್ರಾಂತಿ ಮತ್ತು ಸ್ಮಾರ್ಟ್ ಫೋನ್ ಗಳ ಯುಗದಲ್ಲಿ ಈಗ ನಮಗೆ ಬೇಕಾಗುವ ಮಾಹಿತಿಯನ್ನು ನಮ್ಮ ಬೆರಳು ತುದಿಯಲ್ಲಿಯೇ ಲಭ್ಯವಿದೆ. ನಮ್ಮ ಮೊಬೈಲ್ನಲ್ಲಿ ಗೂಗಲ್ ಸರ್ಚ್ ಮಾಡಿ ನಮಗೆ ಬೇಕಾದ ಮಾಹಿತಿ ಹುಡುಕುವುದು ಸುಲಭವಾಗಿರಬಹುದು ಆದರೆ ಮಾಹಿತಿ ಸ್ಫೋಟದ ಪರಿಣಾಮದಿಂದ ಒಂದು ವಿಷಯದ ಕುರಿತು ನಿಖರ ಮತ್ತು ನಿರ್ದಿಷ್ಟ ಮಾಹಿತಿ ಪಡೆಯುವುದು ತುಂಬಾ ಸವಾಲಿನ ಕೆಲಸವಾಗಿದೆ. ಯಾವುದೇ ಸಾಮಾನ್ಯ ಮಾಹಿತಿಗಾಗಿ ಜಾಲತಾಣದಲ್ಲಿ ಸರ್ಚ್ ಮಾಡಿದಾಗ ಸಾವಿರಾರು ಫಲಿತಾಂಶಗಳು ನಮ್ಮ ಮುಂದೆ ಬಂದು ಬೀಳುತ್ತವೆ. ಒಬ್ಬ ಸಂಶೋಧನಾ ವಿದ್ಯಾರ್ಥಿಯಾಗಿ ಅಂತರ್ಜಾಲದಲ್ಲಿ ತನಗೆ ಬೇಕಾಗಿರುವ ಮಾಹಿತಿ ಏನು? ಅದು ಎಲ್ಲಿ

ದೊರೆಯುತ್ತದೆ? ಅದನ್ನು ಲಕ್ಷಗಟ್ಟಲೆ ಪುಟಗಳಿರುವ ಡಿಜಿಟಲ್ ಮಹಾಸಾಗರದಲಿ ಹೇಗೆ ಕೆದಕಿ ತೆಗೆಯಬೇಕು? ದೊರೆತ ಮಾಹಿತಿಯ ಪರಾಮರ್ಶೆ ನಡೆಸುವ ರೀತಿ ಇತ್ಯಾದಿಗಳ ಕುರಿತು ಸ್ಪಷ್ಟತೆ ಇರುವುದು ತುಂಬಾ ಮುಖ್ಯವಾಗಿರುತ್ತದೆ. ಈ ಕೌಶಲವನ್ನು ಮಾಹಿತಿ ತಂತ್ರಜ್ಞಾನದ ಭಾಷೆಯಲ್ಲಿ 'ಡಿಜಿಟಲ್ ಸಾಕ್ಷರತೆ' (ಇನ್ ಫಾರ್ಮೇಷನ್ ಲಿಟರಸಿ) ಎಂದು ಕರೆಯುತ್ತಾರೆ. ನಿತ್ಯ ಬದಲಾಗುತ್ತಿರುವ ಡಿಜಿಟಲ್ ಯುಗದಲ್ಲಿ ಗ್ರಂಥಪಾಲಕರ ಮತ್ತು ಗ್ರಂಥಾಲಯಗಳ ಕಾರ್ಯ ಸ್ವರೂಪ ಸಹ ಬದಲಾಗಿದ್ದು ಈಗ ಅವುಗಳನ್ನು ಡಿಜಿಟಲ್ ಗ್ರಂಥಾಲಯಗಳೆಂದು ಕರೆಯಲಾಗುತ್ತದೆ. ಕಾಲೇಜು ಮತ್ತು ಮಹಾವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ವಿದ್ಯಾರ್ಥಿ ಮತ್ತು ಗ್ರಂಥಪಾಲಕರ ಸಂಬಂಧ 'ನಿಮ್ಮಲ್ಲಿ ಈ ಪುಸ್ತಕ ಇದೆಯಾ?' ಎಂಬ ಪ್ರಶ್ನೆಗಳಿಗೆ ಮಾತ್ರ ಸೀಮಿತವಾಗಿದೆ. ಆದರೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಅನ್ ಲೈನ್ ನಿಯತಕಾಲಿಕೆಗಳು ಮತ್ತು ಡೇಟಾಬೇಸ್ ಹೊಂದಿರುವ ಡಿಜಿಟಲ್ ಗ್ರಂಥಾಲಯಗಳಲ್ಲಿ ವಿದ್ಯಾರ್ಥಿ ಪ್ರಾಧ್ಯಾಪಕರು ಹಾಗೂ ಗ್ರಂಥಪಾಲಕರ ನಡುವೆ ಉತ್ತಮ ಸಂವಹನ ಇರುವುದು ತುಂಬಾ ಅವಶ್ಯಕ.

## ಆಧಾರ ಗ್ರಂಥಗಳು


1. ಗ್ರಂಥಾಲಯಗಳು Web Link: https://kn.wikipedia.org/wiki/%E0%B2%97%E0%B3%8D%E0%B2%B0%E0%B2%82%E0%B2%A5%E0%B2%BE%E0%B2%B2%E0%B2%AF%E0%B2%97%E0%B2%B3%E0%B3%81 visited on: 24/02/2023
2. ಗ್ರಂಥಾಲಯ ಮತ್ತು ಸಮಾಜ Weblink: https://www.studocu.com/in/document/mahatma-gandhi-university/library-science/library-and-society/30623265 Visited on: 24/02/2023
3. ಗ್ರಂಥಾಲಯ, Weblink: https://kn.vikaspedia.in/education/cb6c95ccdcb7ca3cbfc95-c85ca4ccdcafcc2ca4ccdca4cae-cb0cc2ca2cbfc97cb3cc1-caaca6ccdca7ca4cbfc97cb3cc1/c97ccdcb0c82ca5cbecb2caf Visited on: 28/02/2023
4. ಗ್ರಂಥಾಲಯ Weblink: https://www.britannica.com/topic/library Visited on: 02/03/2023
5. ಸಾರ್ವಜನಿಕ *ಗ್ರಂಥಾಲಯ ಮತ್ತು ಸಮಾಜ* weblink: https://egyankosh.ac.in/handle/123456789/64295 Visited on: 02/03/2023
6. ಗ್ರಂಥಾಲಯದ ಉದ್ದೇಶಗಳು Weblink: https://ccl.karnataka.gov.in/info-1/VISION+OBJECTIVE+AND+MISSION/kn Visited on: 02/03/2023
7. ಗ್ರಂಥಾಲಯಗಳು ಜ್ಞಾನ ಕೇಂದ್ರಗಳು weblink: https://vijaykarnataka.com/news/chikkaballapura/-/articleshow/56086708.cms Visited on: 07/03/2023